ಬೆವಿಕಂ

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

BESCOM

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

## ಅಧಿಸೂಚನೆ

ವಿಷಯ: ಭೂಗತ ಓಎಫ್‌ಸಿ ಜಾಲ ಮತ್ತು ಮೇಲುಮಾರ್ಗದ ದಾರಿಯ ಹಕ್ಕುಗಳನ್ನು (ಆರ್‌ಓಡಬ್ಲ್ಯೂ) ಗುತ್ತಿಗೆ ನೀಡಲು ಆಸಕ್ತ ಸಂಸ್ಥೆಗಳಿಂದ ಒಳಹರಿವುಗಳನ್ನು ಆಹ್ವಾನಿಸುವುದು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕರ್ನಾಟಕ ರಾಜ್ಯದ ಎಂಟು ಜಿಲ್ಲೆಗಳಲ್ಲಿ(ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ದಾವಣಗೆರೆ, ತುಮಕೂರು, ಚಿತ್ರದುರ್ಗ ಮತ್ತು ರಾಮನಗರ) ವಿದ್ಯುತ್ ವಿತರಣೆಯ ಜವಾಬ್ದಾರಿಯನ್ನು ಹೊಂದಿದೆ. ಬೆವಿ.ಕಂಪನಿಯು, ಸುಮಾರು 207 ಲಕ್ಷ ಜನಸಂಖ್ಯೆಯುಳ್ಳ 41,092 ಚ.ಕಿ.ಮೀ ವ್ಯಾಪ್ತಿಯ ವಿಸ್ತೃತ ಪ್ರದೇಶವನ್ನು ಹೊಂದಿದೆ. ಕಂಪನಿಯು ನಾಲ್ಕು ಕಾರ್ಯಾಚರಣಾ ವಲಯಗಳನ್ನು ಹೊಂದಿದೆ- ಬೆಂಗಳೂರು ಮಹಾನಗರ ಕ್ಷೇತ್ರ ವಲಯ(ಉತ್ತರ), ಬೆಂಗಳೂರು ಮಹಾನಗರ ಕ್ಷೇತ್ರ ವಲಯ(ದಕ್ಷಿಣ), ಬೆಂಗಳೂರು ಗ್ರಾಮಾಂತರ ಕ್ಷೇತ್ರ ವಲಯ ಮತ್ತು ಚಿತ್ರದುರ್ಗ ವಲಯ, 9 ವೃತ್ತಗಳು, 32 ವಿಭಾಗಳು, 147 ಉಪ-ವಿಭಾಗಗಳು ಮತ್ತು 534 ಶಾಖಾ ಕಚೇರಿಗಳು.

ವಿತರಣಾ ಯಾಂತ್ರೀಕೃತಗೊಂಡ ವ್ಯವಸ್ಥೆಗಳು(ಡಾಸ್), ಐಪಿಡಿಎಸ್, 11 ಕೆವಿ ಮತ್ತು 415 ವೋಲ್ಟ್‌ಗಳ ಮೇಲ್ಮಾರ್ಗದ ವಿದ್ಯುತ್ ವಿತರಣಾ ಮಾರ್ಗಗಳನ್ನು ಭೂಗತ ಮಾರ್ಗಗಳಾಗಿ ಪರಿವರ್ತಿಸುವುದು, ಸಹ-ಸ್ಥಾಪಿತ ಆಪ್ಟಿಕಲ್ ಫೈಬರ್ ಸಂವಹನ(ಓಎಫ್‌ಸಿ) ಕೇಬಲ್‌ಗಳನ್ನು ಮತ್ತು ಇತರ ಐಟಿ/ಒಟಿ ಯೋಜನೆಗಳನ್ನು ಬೆ.ವಿ.ಕಂಪನಿಯು ಬೆಂಗಳೂರು ನಗರ ಪ್ರದೇಶದಲ್ಲಿ ಜಾರಿಗೆ ತಂದಿದೆ.

ಎರ್ನ್ಸ್ಟ್ ಮತ್ತು ಯಂಗ್ ಎಲ್‌ಎಲ್‌ಪಿ(ಇವೈ) ಅನ್ನು ಬೆ.ವಿ.ಕಂಪನಿಯ ವಹಿವಾಟು ಸಲಹೆಗಾರರಾಗಿ ಓಎಫ್‌ಸಿ ಸ್ವತ್ತುಗಳ ಆರ್ಥಿಕಕರಣಕ್ಕಾಗಿ ನೇಮಕ ಮಾಡಲಾಗಿದೆ. ಮುಂದುವರಿದು, ಈ ಆರ್ಥಿಕಕರಣವು ಈ ಕೆಳಗಿನ ಮಾರುಕಟ್ಟೆಗಳಲ್ಲಿ ಬೆ.ವಿ.ಕಂಪನಿಯ ದರಪಟ್ಟಿ ರಹಿತ ವ್ಯಾಪಾರ ಮಾರ್ಗಗಳನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ:

1. ಬೆ.ವಿ.ಕಂಪನಿಯು ಬೆಂಗಳೂರು ನಗರದಲ್ಲಿ ಸ್ಥಾಪಿಸಲು ಹೊರಟಿರುವ ಸುಮಾರು 6000.ಕಿ.ಮೀ.ಗಳಷ್ಟು ಉದ್ದದ ಭೂಗತ ಆಪ್ಟಿಕಲ್ ಫೈಬರ್ ಕೇಬಲ್ ಜಾಲವನ್ನು (ಓಎಫ್‌ಸಿ) ಗುತ್ತಿಗೆ ನೀಡುವುದು.
2. ಬೆ.ವಿ.ಕಂಪನಿಯ ಸಂಪೂರ್ಣ ವ್ಯಾಪ್ತಿಯಲ್ಲಿ ಸುಮಾರು 1,20,000 ಕಿ.ಮೀ. ಗಳಿಗೆ ಮೇಲ್ಮಾರ್ಗದ ವಿದ್ಯುತ್ ಮೂಲಸೌಕರ್ಯಕ್ಕಾಗಿ ದಾರಿಯ ಹಕ್ಕನ್ನು(ಆರ್‌ಓಡಬ್ಲ್ಯೂ) ಗುತ್ತಿಗೆ ನೀಡುವುದು.

ಈ ಸೂಚನೆಯ ಮೂಲಕ, ಭೂಗತ ಓಎಫ್‌ಸಿ ಮತ್ತು ಮೇಲ್ಮಾರ್ಗದ ದಾರಿಯ ಹಕ್ಕುಗಳನ್ನು(ಆರ್‌ಓಡಬ್ಲ್ಯೂ) ಗುತ್ತಿಗೆಗೆ ನೀಡಲು, ಮಾರುಕಟ್ಟೆಯ ಅಗತ್ಯತೆಯನ್ನು ಅರ್ಥಮಾಡಿಕೊಳ್ಳಲು ಬೆ.ವಿ.ಕಂಪನಿಯು ಆಸಕ್ತ ಸಂಸ್ಥೆಗಳಿಂದ(ಅಂದರೆ ಟೆಲಿಕಾಂ ಮತ್ತು ಅಂತರ್ಜಾಲ ಸೇವಾ ಪೂರೈಕೆದಾರರು, ಐಪಿ-1 ನೋಂದಾಯಿತ ಕಂಪನಿಗಳು) ಒಳಹರಿವುಗಳನ್ನು ಕೋರುತ್ತಿದೆ. ಆಸಕ್ತ ಸಂಸ್ಥೆಗಳು ತಮ್ಮ ಒಳಹರಿವುಗಳನ್ನು ತಿಳಿಸಲು ಈ ಕೆಳಗಿನ ಮಾಹಿತಿಯನ್ನು ಪಡೆಯಬಹುದು. ಪಕ್ಷಗಳ ನಡುವೆ ವಿನಿಮಯವಾಗುವ ಮಾಹಿತಿಯನ್ನು ಕಾಪಾಡಲು ಬೆ.ವಿ.ಕಂಪನಿ ಮತ್ತು ಸಂಸ್ಥೆಯು ಬಹಿರಂಗ ಪಡಿಸದ ಒಪ್ಪಂದಕ್ಕೆ ಬರುತ್ತವೆ.

ಅ. ವಿಭಾಗ/ಉಪ-ವಿಭಾಗವಾರು ಯೋಜಿಸಲಾಗಿರುವ ಭೂಗತ ಓಎಫ್‌ಸಿ ಮಾರ್ಗ ಕಿ.ಮೀ.ಗಳಲ್ಲಿ, ಸ್ಥಾಪಿಸಲಾದ ಮತ್ತು ಲಭ್ಯವಿರುವ ಫೈಬರ್ ಜೋಡಿಗಳ ಸಂಖ್ಯೆ.

ಆ. ಭೂಗತ ಜಾಲದ ಉದ್ದಕ್ಕೂ ಯೋಜಿಸಲಾದ ಮತ್ತು ಸಮೀಕ್ಷೆ ಮಾಡಲಾದ ಓಎಫ್‌ಸಿ ಟ್ಯಾಪಿಂಗ್ ಪಾಯಿಂಟ್‌ಗಳ ಜಿಐಎಸ್ ನಿರ್ದೇಶಾಂಕಗಳು.

ಇ. ಫೈಬರ್ ಹಾಕಲು ನಿರೀಕ್ಷಿತ ಪೂರ್ಣಗೊಳಿಸುವ ದಿನಾಂಕಗಳು

-------------------------------

ಡಾರ್ಕ್ ಫೈಬರ್, ದಾರಿಯ ಹಕ್ಕು (ರೈಟ್ ಆಫ್ ವೇ), ಡಕ್ಟ್ ಸ್ಪೇಸ್ ಮತ್ತು ಗೋಪುರ (ಟವರ್)ದಂತಹ ಸ್ವತ್ತುಗಳನ್ನು ಒದಗಿಸುವ ಮೂಲಸೌಕರ್ಯ ಪೂರೈಕೆದಾರರನ್ನು ಮೂಲಸೌಕರ್ಯ ಪೂರೈಕೆದಾರರ ವರ್ಗ-I ಎಂದು ಕರೆಯುತ್ತಾರೆ. ಭಾರತ ಸರ್ಕಾರದ ಟೆಲಿಕಾಂ ಇಲಾಖೆಯೊಂದಿಗೆ ನೋಂದಾಯಿಸಲ್ಪಟ್ಟ ಮೂಲಸೌಕರ್ಯ ಪೂರೈಕೆದಾರರ ವರ್ಗ-I (ಐಪಿ-I). ಡಾರ್ಕ್ ಫೈಬರ್, ದಾರಿಯ ಹಕ್ಕು (ರೈಟ್ ಆಫ್ ವೇ), ಡಕ್ಟ್ ಸ್ಪೇಸ್ ಮತ್ತು ಗೋಪುರ (ಟವರ್)ದಂತಹ ಸ್ವತ್ತುಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಗುತ್ತಿಗೆ/ಬಾಡಿಗೆ/ಮಾರಾಟ ಆಧಾರದ ಮೇಲೆ ಅನುದಾನ ನೀಡುವ ಉದ್ದೇಶದಿಂದ ಟೆಲಿಕಾಂ ಸೇವೆಗಳ ಪರವಾನಗಿದಾರರು ಪರಸ್ಪರ ಒಪ್ಪಿದ ನಿಯಮಗಳು ಮತ್ತು ಷರತ್ತುಗಳ ಮೇಲೆ ಭಾರತೀಯ ಟೆಲಿಗ್ರಾಫ್ ಕಾಯ್ದೆ, 1885 ರ ಸೆಕ್ಷನ್ 4 ರಡಿಯಲ್ಲಿ ಪರವಾನಗಿಯನ್ನು ಪಡೆದಿದ್ದಾರೆ.

ಈ. ಬೆ.ವಿ.ಕಂಪನಿಗೆ ಲಭ್ಯವಿರುವ ಮತ್ತು ಆರ್ಥಿಕವಾಗಿ ಲಾಭದಾಯಕವಾಗಿಸುಲು ಲಭ್ಯವಿರುವ ಫೈಬರ್ ಜೋಡಿಗಳ ಸಂಖ್ಯೆ

ಉ. ವಿಭಾಗವಾರು ಮೇಲ್ಮಾರ್ಗದ ಎಲ್‌ಟಿ ಮತ್ತು ಹೆಚ್‌ಟಿ ಮಾರ್ಗಗಳು ಮತ್ತು ಕಂಬಗಳ ಸಂಖ್ಯೆಯ ಮಾರ್ಗ, ಕಿ.ಮೀ ಗಳಲ್ಲಿ (ಅಂದಾಜು)

ಭೂಗತ ಓಎಫ್‌ಸಿ ಮತ್ತು ಮೇಲ್ಮಾರ್ಗದ ದಾರಿಯ ಹಕ್ಕುಗಳನ್ನು ಪ್ರತ್ಯೇಕವಾಗಿ ಗುತ್ತಿಗೆ ಪಡೆಯುವ ಇಚ್ಛೆಯನ್ನು ಸೂಚಿಸುವ ಒಳಹರಿವುಗಳನ್ನು ಒದಗಿಸಲು ಆಸಕ್ತ ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಈ ಕೆಲಸವನ್ನು, ಪರಿಗಣನೆಯಲ್ಲಿರುವ ಸ್ವತ್ತುಗಳಿಗೆ ವಿವಿಧ ಪ್ಯಾಕೇಜ್‌ಗಳ ಪ್ರಸ್ತಾವನೆಗಳ ಆಹ್ವಾನವನ್ನು ಕೋರುತ್ತಾ ಅನುಸರಿಸಲಾಗುವುದು. ಈ ಆರ್ಥಿಕಕರಣದ ಅಡಿಯಲ್ಲಿರುವ ಸ್ವತ್ತುಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಆರ್‌ಎಫ್‌ಪಿ ಹಂತದಲ್ಲಿ ಎಲ್ಲಾ ಸಂಭಾವ್ಯ ಬಿಡ್ಡುದಾರರಿಗೆ ಮತ್ತೆ ಲಭ್ಯವಾಗುವಂತೆ ಮಾಡಲಾಗುತ್ತದೆ.

ಆಸಕ್ತ ಸಂಸ್ಥೆಗಳಿಂದ **ಒಳಹರಿವುಗಳನ್ನು** ಹಂಚಿಕೊಳ್ಳಲು ಸೂಚಕ ಟೆಂಪ್ಲೇಟ್‌ನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ನೀಡಲಾಗಿದೆ:

**ಭೂಗತ** ಓಎಫ್‌ಸಿ **ಹಕ್ಕುಗಳ ಗುತ್ತಿಗೆಗೆ ಬೇಡಿಕೆ:**

| ವಿಭಾಗ/ಉಪ-ವಿಭಾಗದ ಹೆಸರು | **ಭೂಗತ** ಓಎಫ್‌ಸಿ ಕಿ.ಮೀ.ಗಳಲ್ಲಿ | ಫೈಬರ್ ಜೋಡಿಗಳ ಸಂಖ್ಯೆ | ಗುತ್ತಿಗೆಯ ಅವಧಿ ವರ್ಷಗಳಲ್ಲಿ | ಬೇಡಿಕೆಯ ಮಾನ್ಯತೆಯ ಅವಧಿ(ತಿಂಗಳುಗಳಲ್ಲಿ) |
|---|---|---|---|---|
| | | | | |
| | | | | |
| | | | | |

**ಮೇಲ್ಮಾರ್ಗದ ದಾರಿಯ ಹಕ್ಕುಗಳ(ಆರ್‌ಓಡಬ್ಲ್ಯೂ) ಗುತ್ತಿಗೆಗೆ ಬೇಡಿಕೆ:**

| ವಿಭಾಗದ ಹೆಸರು | ದಾರಿಯ ಹಕ್ಕಿನ ಮಾರ್ಗ ಕಿ.ಮೀ.ಗಳಲ್ಲಿ | ಕಂಬಗಳ ಸಂಖ್ಯೆ |
|---|---|---|
| | | |
| | | |
| | | |

ಎಲ್ಲಾ ಪ್ರಶ್ನೆಗಳು, ಮಾಹಿತಿ/ಡೇಟಾ ಮತ್ತು <u>ಒಳಹರಿವಿನ</u> ಲಭ್ಯತೆಗಾಗಿ ವಿನಂತಿಗಳನ್ನು ಈ ಕೆಳಗೆ ಸೂಚಿಸಿರುವ ಅಧಿಕಾರಿಗಳಿಗೆ ನಿರ್ದೇಶಿಸತಕ್ಕದ್ದು:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಯೋಜನೆಗಳು), ಬೆ.ವಿ.ಕಂ.,
   ಇ-ಮೇಲ್: cgmproject.bescom@gmail.com
   ಮೊಬೈಲ್ ಸಂಖ್ಯೆ: +91 9449844885
2. ಉಪ ಪ್ರಧಾನ ವ್ಯವಸ್ಥಾಪಕರು(ಓಎಫ್‌ಸಿ), ಬೆ.ವಿ.ಕಂ.,
   ಇ-ಮೇಲ್: dgmofcbescom@gmail.com
   ಮೊಬೈಲ್ ಸಂಖ್ಯೆ: +91 9449844627
   ಮತ್ತು ನಮ್ಮ ವಹಿವಾಟಿನ ಸಲಹೆಗಾರರು- ಅರ್ನ್ಸ್ಟ್ ಮತ್ತು ಯಂಗ್ ಎಲ್‌ಎಲ್‌ಪಿ
3. ಇವರಲ್ಲಿ ಸಂಪರ್ಕಿಸಬಹುದಾದ ವ್ಯಕ್ತಿ: ಸಿದ್ಧಾರ್ಥ ಶರ್ಮ
   ಇ-ಮೇಲ್: siddharth2.sharma@in.ey.com
   ಮೊಬೈಲ್ ಸಂಖ್ಯೆ: +91 7829081105

08/07/2021

ಮುಖ್ಯ ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು)
ಬೆ.ವಿ.ಕಂ